# ಹಿಡಿ ಗಂಜಿಯ ಜಾತಕ

ಸ್ವಾಮಿ ವೀರೇಶಾನಂದ

ದಾನವನ್ನು ತುಂಬುಹೃದಯದಿಂದ ನೀಡಬೇಕು. ಪಾತ್ರರಾದವರಿಗೆ ನೀಡಬೇಕು. ಇದರಿಂದ ಮಹಾಫಲವೇ ದೊರಕುತ್ತದೆ. ಜಗತ್ತಿನಲ್ಲಿ ಕನಿಷ್ಠ ದಾನವೆಂಬುದು ಇಲ್ಲವೇ ಇಲ್ಲ. ಪರಿಶುದ್ಧ ಹೃದಯದಿಂದ ಏನನ್ನು ನೀಡಿದರೂ ಅಂಥ ದಾನವು ಉತ್ತಮವೇ. ಈ ಮಹಾನ್ ಆದರ್ಶವನ್ನು ಈ ಕಥೆಯು ನಮಗೆ ತಿಳಿಸಿಕೊಡುತ್ತದೆ:

ಆ ಕಾಲದಲ್ಲಿ ನಮ್ಮ ಪ್ರಭುವಾದ ಬೋಧಿಸತ್ವನು ಕೋಸಲ ದೇಶದ ಅಧಿಪತಿಯಾಗಿದ್ದನು. ಅವನು ರಾಜನಿಗೆ ಬೇಕಾದ ಎಲ್ಲ ಉದಾತ್ತಗುಣಗಳನ್ನೂ ತನ್ನ ವ್ಯಕ್ತಿತ್ವದಲ್ಲಿ ಪ್ರದರ್ಶಿಸುತ್ತಿದ್ದನು. ಅವನು ಶಕ್ತಿವಂತನಾಗಿದ್ದನು; ಗುಣಾಗುಣಗಳ ಪರಿಜ್ಞಾನವನ್ನು ಹೊಂದಿದ್ದನು; ರಾಜಗಾಂಭೀರ್ಯ ಅವನಲ್ಲಿ ಮನೆಮಾಡಿತ್ತು; ಅಧಿಕಾರವನ್ನು ಪ್ರದರ್ಶಿಸುತ್ತಿದ್ದನು. ಆದರೆ ಅವನ ಒಂದು ಗುಣವಾದ ದಾನಶೀಲತೆಯು ಅವನ ಬೇರೆಲ್ಲ ಗುಣಗಳನ್ನೂ ಮೀರಿ ಎತ್ತರಕ್ಕೆ ಬೆಳೆದಿತ್ತು. ಎಲ್ಲ ಜನರನ್ನೂ ಅವನಲ್ಲಿ ಆಕರ್ಷಿಸುತ್ತಿತ್ತು.

ಸಂಪತ್ತು ಅವನ ಸಹಭಾಗಿಯಾಗಿತ್ತು. ಇದು ಇತರ ರಾಜರ ಅಸೂಯೆಗೆ ಕಾರಣವಾಗಿತ್ತು. ಅವನ ಶತ್ರುಗಳನ್ನು ತ್ಯಜಿಸಿದ ಲಕ್ಷ್ಮಿಯು ಈ ರಾಜನ ಅರಮನೆಯನ್ನೇ ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಳು. ರಾಜನು ನ್ಯಾಯವಂತನಾಗಿದ್ದನು. ತನ್ನ ಮನಸ್ಸನ್ನು ಕೆಡುಕಿನಿಂದ ಯಾವತ್ತೂ ದೂರವಿಟ್ಟಿದ್ದನು. ತನ್ನ ಶತ್ರುಗಳನ್ನು ಕೂಡ ಸಂಪೂರ್ಣವಾಗಿ ದಮನ ಮಾಡಲು ಅವನಿಗೆ ಮನಸ್ಸು ಬರುತ್ತಿರಲಿಲ್ಲ. ಅವನ ಮೇಲೆ ಅವಲಂಬಿಸಿರುವ ಜನರು ಅವನನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು.

ಒಂದು ದಿನ ವಿಶೇಷವೊಂದು ಘಟಿಸಿತು. ರಾಜನು ತನ್ನ ಪೂರ್ವಜನ್ಮದ ಸ್ಮರಣೆಯನ್ನು ಮಾಡಿಕೊಂಡನು. ಇದರಿಂದ ಅವನು ತುಂಬ ಭಾವುಕ ಮನಸ್ಸಿನವನಾದನು. ಇದರಿಂದ ಅಂದು ವಿಶೇಷವಾಗಿ ದಾನಧರ್ಮವನ್ನು ಕೈಗೊಂಡನು. ಯಾವತ್ತೂ ಈ ದಾನಕ್ರಿಯೆಯೇ ಅವನ ಮನಸ್ಸಿನ ಸಂತೋಷದ ಕಾರಣವಾಗಿತ್ತು. ಅಂತೆಯೇ ಶ್ರಮಣರಿಗೂ, ಬ್ರಾಹ್ಮಣರಿಗೂ ಯಥೇಚ್ಛವಾಗಿ ದಾನಮಾಡಿದನು. ನಿರ್ಗತಿಕರಿಗೂ ಭಿಕ್ಷುಕರಿಗೆ ಅವರು ಇಷ್ಟಪಟ್ಟಿದ್ದನ್ನೆಲ್ಲವನ್ನೂ ಕೊಟ್ಟುಬಿಟ್ಟನು. ತನ್ನ ಗುಣಶೀಲತೆಯನ್ನು ಕರಾರುವಾಕ್ಕಾಗಿ ಕಾಪಾಡಿಕೊಂಡಿದ್ದನು. ದಿನನಿತ್ಯದ ಜಪಧ್ಯಾನಗಳನ್ನು, ಪೂಜಾದಿಗಳನ್ನು ಚಾಚೂತಪ್ಪದೆ ಮಾಡುತ್ತಿದ್ದನು. ಇದಲ್ಲದೆ ಸಮಸ್ತ ಜನಸಮೂಹವನ್ನು ಸದಾಚಾರದ ಮಾರ್ಗಕ್ಕೆ ಕರೆತಂದು, ಮೋಕ್ಷದ ಕಡೆಗೆ ಕರೆದುಕೊಂಡು ಹೋಗುವ ಮಹದೋದ್ದೇಶವನ್ನು ಅವನು ಹೊಂದಿದ್ದನು. ಅವನು ತನ್ನ ಮಾತಿನಲ್ಲಿ ಕಪಟತೆಯನ್ನು ಮಾಡುತ್ತಿರಲಿಲ್ಲ. ಯಾವ ವಿಶ್ವಾಸಾರ್ಹ ಮಾತುಗಳನ್ನು ತನ್ನ ರಾಜ ಸಭಾಂಗಣದಲ್ಲಿ ಆಡುತ್ತ, ಎಲ್ಲರನ್ನೂ ಮುಗ್ಧರನ್ನಾಗಿ ಮಾಡುತ್ತಿದ್ದನೋ, ಅದೇ ರೀತಿ ತನ್ನ ಅರಮನೆಯ ಅಂತಃರಂಗದಲ್ಲಿಯೂ ಅದಕ್ಕೆ ವಿರುದ್ಧವಲ್ಲದೆ, ಸತ್ಯವನ್ನೇ ಆಡುತ್ತಿದ್ದನು.

ಅವನು ತನ್ನ ಮನಸ್ಸಿನ ಭಾವನೆಯನ್ನು ಸಭಾಸದರಿಗೆ ಈ ರೀತಿಯಾಗಿ ವ್ಯಕ್ತಪಡಿಸಿದನು:

''ನೀವು ಬುದ್ಧರಾದವರಿಗೆ ಅಲ್ಪ ಗೌರವವನ್ನು ನೀಡಿದರೂ ಕೂಡ, ಅದು ಅಗಣಿತ ಫಲವನ್ನು ನೀಡುತ್ತದೆ. ಇದನ್ನು ಕೇವಲ ಮಾತಿನಿಂದ ಮಾತ್ರ ಹೇಳುತ್ತಾರೆ. ಆದರೆ ಅದನ್ನು ಪ್ರತ್ಯಕ್ಷವಾಗಿ ನೋಡಬಹುದು. ನೋಡಿ, ಉಪ್ಪು ಕೂಡ ಇಲ್ಲದ, ಒಣಗಿರುವ, ಬಿರುಸಾದ, ಕೆಂಪುಕಂದು ಬಣ್ಣದ ಗಂಜಿಯ ದಾನದಿಂದ ಮಹತ್ತಾದ ಫಲವನ್ನು ಪಡೆಯಬಹುದು. ನನ್ನ ಸೈನ್ಯವು ಸುಂದರವಾದ ರಥಗಳನ್ನು, ಕುದುರೆಗಳನ್ನು ಇಲ್ಲವೇ ಕಪ್ಪಗಿರುವ ಭೀಕರ ಆನೆಗಳನ್ನು ಹೊಂದಿರಬಹುದು. ನನಗೆ ಇಡೀ ಭೂಮಿಯ ಒಡೆತನವೂ ಇರಬಹುದು. ಜಗತ್ತಿನ ಎಲ್ಲ ಸಂಪತ್ತು ಕೂಡ ನನ್ನ ಕಾಲಬುಡದಲ್ಲಿ ಬಿದ್ದಿರಬಹುದು. ನನಗೆ ಅನುಸರಣಶೀಲಳಾದ ಪತ್ನಿಯು ಕೂಡ ಇರಬಹುದು. ಆದರೆ ಇದೆಲ್ಲ ಒಂದು ಹಿಡಿ ಒರಟು ಗಂಜಿಯ ಸಣ್ಣ ಭಾಗದ ಅಪಾರ ಸೌಂದರ್ಯಕ್ಕೆ ಸಮನಾದುದಲ್ಲ ಎಂದು ನನ್ನ ಅಭಿಪ್ರಾಯ.''

ಮಹಾರಾಜನ ಈ ವಿಚಿತ್ರ ಮಾತುಗಳನ್ನು ಕೇಳಿ ವೃದ್ಧರಾದ ಬ್ರಾಹ್ಮಣರು, ಪುರದ ಮುಖ್ಯರು, ಮಂತ್ರಿಗಳು ಮುಂತಾಗಿ ಅಲ್ಲಿ ನೆರೆದಿದ್ದ ಎಲ್ಲರೂ ದಿಗ್ಭ್ರಾಂತರಾದರು. ಅದರ ಅಂತರಾರ್ಥ ಅವರಾರಿಗೂ ಅರಿವಾಗಲಿಲ್ಲ. ಇದರ ಅರ್ಥವನ್ನು ತಿಳಿಯಲು ಕಾತರರಾದರು. ಮೇಲಿನ ಮಾತುಗಳಿಗೆ ವಿವರಣೆಯನ್ನು ಕೊಡು ಎಂದು ಅವನಿಗೆ ಪ್ರಾರ್ಥಿಸಿಕೊಂಡರು.

ರಾಜನು ಅದನ್ನು ಮನ್ನಿಸಲಿಲ್ಲ. ಅಂದಿನಿಂದ ಪ್ರತಿ ನಿಮಿಷವೂ ಮೇಲಿನ ಮಾತುಗಳನ್ನು ಉಚ್ಚರಿಸಿಕೊಂಡು, ತನ್ನ ಮನಸ್ಸನ್ನು ಸಂತೋಷಗೊಳಿಸಿಕೊಳ್ಳುತ್ತಿದ್ದನು.

ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಅವನ ಮಹಾರಾಣಿಗೂ ಸ್ವಲ್ಪ ಕಸಿವಿಸಿಯೇ ಆಯಿತು. ಅವಳು ತನ್ನ ಪತಿಯೊಂದಿಗೆ ಸಂಭಾಷಣೆ ನಡೆಸುತ್ತಿದ್ದಾಗ, ಈ ಮಾತನ್ನು ಹೇಳಿದಳು: ''ಪ್ರಭುವೇ, ನೀವು ಎರಡು ಶ್ಲೋಕಗಳನ್ನು ನಿನಗೆ ನೀವೇ ಹೇಳಿಕೊಳ್ಳುತ್ತಿರುವಿರಿ. ನಿಮ್ಮ ಹೃದಯದ ಸಂತೋಷವನ್ನು ಅದರ ಮೂಲಕ ನೀನು ವ್ಯಕ್ತಪಡಿಸುತ್ತಿರುವಿರಿ. ಈ ನಿಮ್ಮ ಮಾತುಗಳನ್ನು ಕೇಳಿದ ನಮಗೆ ಇದರ ರಹಸ್ಯವನ್ನು ತಿಳಿದುಕೊಳ್ಳಬೇಕೆಂಬ ಕಾತರತೆ ಉಂಟಾಗಿದೆ. ನಿಮ್ಮ ಮಂತ್ರಿಗಳು, ಸಭಾಸದರು, ಪುರದ ಮುಖ್ಯರು ಎಲ್ಲರೂ ಇದರ ಅಂತರಾರ್ಥವನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದಾರೆ. ದಯವಿಟ್ಟು ಇದರ ಅರ್ಥವನ್ನು ನಮಗೆಲ್ಲ ತಿಳಿಸಿಕೊಡಿ.''

ಆಗ ರಾಜನು ಮಹಾರಾಣಿಯತ್ತ ಮೃದುವಾಗಿ ದೃಷ್ಟಿಯನ್ನು ಬೀರಿದನು. ಮಂದಸ್ಮಿತ ಮುಖದಿಂದ ಅವಳಿಗೆ ಹೀಗೆ ಹೇಳಿದನು:

''ಮತ್ತೆ ಮತ್ತೆ ಹೇಳಿಕೊಳ್ಳುತ್ತಿರುವ ನನ್ನ ಮಾತುಗಳನ್ನು ಕೇಳಿ, ನೀನು ಮಾತ್ರವಲ್ಲ, ಎಲ್ಲರೂ ಮನಸ್ಸಿನಲ್ಲಿ ಇದರ ಅರ್ಥವನ್ನು ತಿಳಿದುಕೊಳ್ಳಬೇಕೆಂದು ಉದ್ವೇಗವುಳ್ಳವರಾಗಿದ್ದಾರೆ. ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೋ.

''ಒಬ್ಬ ನಿದ್ರೆಯಿಂದ ಎಚ್ಚೆತ್ತಿರುವನು ಎಂದು ತಿಳಿದುಕೋ. ಅವನು ಹಿಂದೆ ನಡೆದ ಸಂಗತಿಗಳನ್ನೆಲ್ಲ ನೆನಪಿನಲ್ಲಿ ಇಟ್ಟುಕೊಂಡಿರುತ್ತಾನೆ. ಅದೇ ರೀತಿ, ನಾನು ನನ್ನ ಪೂರ್ವಜನ್ಮದಲ್ಲಿ ನಡೆದಿರುವುದೆಲ್ಲವನ್ನೂ ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ. ನಾನು ನನ್ನ ಹಿಂದಿನ ಜನ್ಮದಲ್ಲಿ ಸೇವಕನಾಗಿ ಕೆಲಸಮಾಡಿಕೊಂಡಿದ್ದೆ. ನನ್ನದು ಒಳ್ಳೆಯ ಗುಣವಾಗಿದ್ದರೂ, ನಾನು ಗಳಿಸುತ್ತಿದ್ದ ಆದಾಯ ಬಹಳ ಅಲ್ಪವಾಗಿತ್ತು. ನಾನು ಕೇವಲ ಧನಸಂಪತ್ತಿನ ಮದದಿಂದ ನನಗಿಂತ ಉನ್ನತಸ್ಥಾನದಲ್ಲಿ ಇರುವವರ ಕೆಳಗೆ ಊಳಿಗತನವನ್ನು ಮಾಡಿಕೊಂಡಿದ್ದೆ.

''ಎಂದಿನಂತೆ ಒಂದು ದಿನ ನನ್ನ ಕೆಲಸವನ್ನು ಆರಂಭಿಸಿದೆ. ನಾನು ಕೆಲಸಮಾಡಬೇಕಾಗಿದ್ದ ಆ ಸ್ಥಾನವು ಕಷ್ಟದಿಂದ ಕೂಡಿತ್ತು; ಅಲ್ಲಿ ನನಗೆ ಜನರು ಇಲ್ಲದ ಅವಮಾನ ಮಾಡುತ್ತಿದ್ದರು; ನನ್ನ ಮನಸ್ಸು ಇದರಿಂದ ದುಃಖತಪ್ತವಾಗಿತ್ತು. ಏಕೆಂದರೆ ನಾನು ನನ್ನ ಕುಟುಂಬವನ್ನು ಭರಿಸುವುದಕ್ಕೆ ಇಲ್ಲದ ತಾಪತ್ರಯಗಳನ್ನು ಎದುರಿಸುತ್ತ ಜರ್ಝರಿತವಾಗಿದ್ದೆನು. ನನ್ನ ಮನಸ್ಸು ಭವಿಷ್ಯದ ಬಗೆಗಿನ ಚಿಂತನೆಯಿಂದ ಭಯಗ್ರಸ್ತವಾಗಿತ್ತು. ದೇಹಯಾಪನೆಯನ್ನು ಮಾಡುವುದಕ್ಕೆ ನನಗೆ ಏನಾದರೂ ಸಿಕ್ಕುವುದೋ ಇಲ್ಲವೋ ಎಂಬ ಕಳವಳದಲ್ಲಿ ನಾನು ಮುಳುಗಿದ್ದೆ.

''ಆಗ ನಾನು ಇಂದ್ರಿಯಗಳನ್ನು ಸಂಯಮಮಾಡಿಕೊಂಡಿರುವ ಶ್ರಮಣರು ಅತ್ತಕಡೆ ಬರುತ್ತಿರುವುದನ್ನು ಕಂಡೆ. ಅವರೆಲ್ಲರೂ ಸಂನ್ಯಾಸಧರ್ಮದ ಅನುಷ್ಠಾನದಿಂದ ಉಂಟಾಗುವ ಪರಮಾನಂದವನ್ನು ತಮ್ಮ ಮುಖಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಅವರೆಲ್ಲರೂ ಭಿಕ್ಷಾಟನೆಯಲ್ಲಿ ನಿರತರಾಗಿದ್ದರು. ನಾನು ಅವರಿಗೆ ನಮನಗಳನ್ನು ಸಲ್ಲಿಸಿದೆನು. ಅವರಿಗೆ ನನ್ನ ಮನೆಯಲ್ಲಿದ್ದ ಒಂದು ಹಿಡಿಯಷ್ಟು ಗಂಜಿಯನ್ನು ತಂದುಕೊಟ್ಟೆನು. ಅವರು ಅದನ್ನು ಸಂತೋಷದಿಂದ ಸ್ವೀಕರಿಸಿದರು. ನನ್ನನ್ನು ಆಶೀರ್ವದಿಸಿ ಹೊರಟುಹೋದರು.

''ಈ ಅಲ್ಪದಾನವು ನನ್ನಲ್ಲಿ ಮಹಾನತೆಯ ವೃಕ್ಷವು ಅಂಕುರವಾಗುವುದಕ್ಕೆ ಕಾರಣವಾಯಿತು. ರಾಜ-ಮಹಾರಾಜರ ಚಕ್ರಾಧಿಪತ್ಯದ ಕಿರೀಟಗಳ ಹೊಳಪುಗಳೆಲ್ಲ ನನ್ನ ಕಾಲಿನ ಧೂಳಿಯಲ್ಲಿ ಪ್ರತಿಫಲಿಸಿದವು.

''ಇದನ್ನು ನಾನು ನೆನಪಿಗೆ ತಂದುಕೊಳ್ಳುತ್ತಿದ್ದೆನು. ನನ್ನ ಆ ಪುಣ್ಯಕಾರ್ಯವನ್ನು ನೆನೆನೆನೆದು ನಾನು ಆನಂದಗೊಳ್ಳುತ್ತಿದ್ದೆನು. ಏಕೆಂದರೆ ಆ ಅಲ್ಪದಾನವೇ, ನನಗೆ ಈಗ ನಾನು ಅನುಭವಿಸುತ್ತಿರುವ ರಾಜ್ಯಭೋಗವನ್ನು ತಂದುಕೊಟ್ಟಿದೆ ಎಂದು ನಾನು ಚೆನ್ನಾಗಿ ಅರಿತಿದ್ದೇನೆ. ದಾನದ ಮಹಿಮೆಯನ್ನು ನೆನೆನೆನೆದು ನನ್ನ ಮನವು ಮುದಗೊಳ್ಳುತ್ತಿದೆ. ಹಾಗೆಂದೇ ಈ ಜನ್ಮದಲ್ಲಿಯೂ ನಾನು ಶ್ರಮಣರನ್ನು, ಬಡಬಗ್ಗರನ್ನು, ನಿರ್ಗತಿಕರನ್ನು ಕರೆಕರೆದು ದಾನಕೊಡುತ್ತಿದ್ದೇನೆ.''

ಇದನ್ನು ಕೇಳಿದ ಮಹಾರಾಣಿಯ ಮುಖವು ಆನಂದದಿಂದ ಬೆಳಗಿತು. ಅಲ್ಲದೆ ಅವಳು ಆಶ್ಚರ್ಯಚಕಿತಳೂ ಆದಳು. ಗೌರವದಿಂದ ತನ್ನ ಕಣ್ಣುಗಳನ್ನು ಪತಿಯೆಡೆಗೆ ಇಟ್ಟು ಹೇಳಿದಳು: ''ಪ್ರಭೂ, ನೀವು ಸರಿಯಾಗಿಯೇ ಹೇಳಿದಿರಿ. ನಿಮ್ಮ ಈ ರಾಜ್ಯಸಂಪತ್ತು ನಿಮ್ಮ ಪುಣ್ಯಕರ್ಮಗಳ ಫಲವೇ ಆಗಿದೆ. ಆದ್ದರಿಂದಲೇ ಇಂದಿನ ಜನ್ಮದಲ್ಲಿಯೂ ನೀವು ದಾನ ಮಾಡುವುದರ ಮೂಲಕ, ನಿಮ್ಮ ಪುಣ್ಯಸಂಪತ್ತನ್ನು ಅಧಿಕಗೊಳಿಸಿಕೊಳ್ಳಲು ಅಹರ್ನಿಶಿ ಪ್ರಯತ್ನಪಡುತ್ತಿದ್ದೀರಿ. ಹಾಗೆಂದೇ, ನೀವು ಎಲ್ಲ ಕೆಡುಕಿನ ಕಾರ್ಯಗಳನ್ನು ತಿರಸ್ಕರಿಸುತ್ತಿದ್ದೀರಿ. ನಿಮ್ಮ ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತ್ತಿದ್ದೀರಿ. ಯಾವತ್ತೂ ಪುಣ್ಯಸಂಪಾದನೆಯಲ್ಲಿಯೇ ನಿರತರಾಗಿದ್ದೀರಿ.

''ಪ್ರಭೂ, ದಾನಕಾರ್ಯದ ಫಲವಾದ ನಿಮ್ಮ ಅಪೂರ್ವ ರಾಜವೈಭವವನ್ನು ಕಂಡು ನಿಮ್ಮ ವಿರೋಧಿ ರಾಜರು, ನಿಮ್ಮಿಂದ ಸೋಲಿಸಲ್ಪಟ್ಟು, ನಿಮ್ಮ ಆಜ್ಞೆಗಾಗಿಯೇ ಕಾಯುತ್ತಿದ್ದಾರೆ. ಸತ್ಯಧರ್ಮಗಳ ಮೇಲೆಯೇ ನಡೆಯುತ್ತಿರುವ ನಿಮ್ಮ ಮಾದರಿ ರಾಜ್ಯಭಾರವು ಬಹಳ ಕಾಲ ಹೀಗೆಯೇ ಮುಂದುವರೆಯುತ್ತಿರಲಿ!''

ರಾಜನು ಈಕೆಯ ಮಾತುಗಳಿಂದ ಸಂತುಷ್ಟನಾದನು. ''ನೀನು ಕೂಡ ನಿನ್ನ ಪೂರ್ವಜನ್ಮದ ವೃತ್ತಾಂತವನ್ನು ನೆನಪಿನಲ್ಲಿ

ಇಟ್ಟುಕೊಂಡಿರುವಂತೆ ತೋರುತ್ತಿದೆ. ಇಂದಿನ ಜನ್ಮದಲ್ಲಿ ಇಂಥ ಉತ್ತಮ ಫಲವನ್ನು ಪಡೆಯುವುದಕ್ಕೆ ನೀನು ಹಿಂದಿನ ಜನ್ಮದಲ್ಲಿ ಏನು ತಾನೇ ಮಾಡಿದ್ದೀಯೆ?''

ಅದಕ್ಕೆ ಮಹಾರಾಣಿ ಉತ್ತರಕೊಡುತ್ತಾಳೆ: ''ಓ ನನ್ನ ಪ್ರಭುವೇ, ನಿಮ್ಮಂತೆ ನನಗೂ ನನ್ನ ಪೂರ್ವಜನ್ಮದ ಸ್ಮರಣೆಯುಂಟು. ನಾನು ಆ ಜನ್ಮದಲ್ಲಿ ಇರುವಾಗಲೇ, ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮುನಿಯೊಬ್ಬನ ಸೇವೆಯನ್ನು ಮಾಡಿಕೊಂಡಿದ್ದೆ. ಆತನ ಪರಿಚರ್ಯೆಯಲ್ಲಿ ಸಂಪೂರ್ಣವಾಗಿ ತನ್ಮಯಳಾಗಿ ಹೋಗಿದ್ದೆ. ಇಂದ್ರಿಯಸಂಯಮವನ್ನು ಮಾಡಿಕೊಂಡಿದ್ದ ಆ ಮಹಾಪುರುಷನ ಸೇವೆಯ ಫಲವಾಗಿ ನನಗೆ ಈ ಜನ್ಮದಲ್ಲಿ ನಿಮ್ಮ ಸಹವಾಸವು ಪ್ರಾಪ್ತವಾಯಿತು. ನೀವೇ ಹೇಳಿದಿರಲ್ಲವೇ, ಯಾರು ಇಂದ್ರಿಯಸಂಯಮಿಗಳಾದ ಮಹಾಪುರುಷರ ಸೇವೆಯನ್ನು ಮಾಡುತ್ತಾರೆಯೋ, ಅವರು ಅಲ್ಪ ಫಲವನ್ನು ಖಂಡಿತ ಪಡೆಯುವುದಿಲ್ಲ ; ಮಹತ್ತರ ಫಲವನ್ನೇ ಪಡೆಯುತ್ತಾರೆ ಎಂದು?''

ಇವರಿಬ್ಬರ ಮಾತುಗಳನ್ನು ಇಡೀ ಸಭೆಯು ಅಚ್ಚರಿಯಿಂದ ಆಲಿಸುತ್ತಿತ್ತು. ಈ ದಂಪತಿಗಳಲ್ಲಿ ಮೂರ್ತಿವೆತ್ತಿದ್ದ ಅನುಕಂಪ ಹಾಗೂ ದಾನಗುಣವನ್ನು ಕಂಡು ನೆರೆದಿದ್ದ ಎಲ್ಲರ ಹೃದಯಗಳೂ ತುಂಬಿಬಂದಿದ್ದವು, ಪುಣ್ಯಕಾರ್ಯಗಳನ್ನು ಮಾಡಿದ್ದರಿಂದ ಬರುವ ಉತ್ತಮ ಫಲದ ಬಗ್ಗೆ ಅವರಿಗೆಲ್ಲರೂ ನಂಬಿಕೆ ಮತ್ತು ವಿಶ್ವಾಸಗಳು ಇಮ್ಮಡಿಯಾಗಿದ್ದವು.

ರಾಜನು ಸಭಾಸದರನ್ನು ಉದ್ದೇಶಿಸಿ ಈ ಮಾತುಗಳನ್ನು ಹೇಳಿದನು:

''ಉತ್ತಮ ಫಲಗಳು, ಅವೆಷ್ಟು ಅಲ್ಪವಾಗಿದ್ದರೂ ಸರಿಯೇ ಅವುಗಳನ್ನು ಪುಣ್ಯಕಾರ್ಯಗಳನ್ನು ಮಾಡದೆಯೇ, ದಾನಕರ್ಮವನ್ನು ಕೈಗೊಳ್ಳದೆಯೇ, ಒಳ್ಳೆಯ ನಡತೆಯನ್ನು ಮೈಗೂಡಿಸಿಕೊಳ್ಳದೆ ಹೇಗೆತಾನೇ ಪಡೆಯಲು ಸಾಧ್ಯ? ಅರ್ಹತೆ ಇದ್ದರೆ ಮಾತ್ರ ಉತ್ತಮ ಫಲವು ಪ್ರಾಪ್ತವಾಗುತ್ತದೆ.

''ಜೀವನದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳುವುದೇ ಮುಖ್ಯವಾದುದು. ಧನಸಂಪತ್ತುಗಳನ್ನು ಕೂಡಿಟ್ಟುಕೊಳ್ಳುವುದಿಲ್ಲ. ಗುಣಸಂಪತ್ತೇ ಜೀವನದಲ್ಲಿ ಅಮೂಲ್ಯವಾದುದು. ಇದನ್ನು ಬಿಟ್ಟು ಸ್ವಾರ್ಥಿಯಾದರೆ ಏನು ತಾನೇ ಪ್ರಯೋಜನ? ಈ ಎಲ್ಲ ದಾನಗಳಿಗೂ ಮಹತ್ತಾದುದು ದಾನಗುಣ. ಉತ್ತಮರಲ್ಲಿ ಕಂಡುಬರುವ ಎಲ್ಲ ಉದಾತ್ತಗುಣಗಳೂ ಕಡೆಯಲ್ಲಿ ದಾನಗುಣವೆಂಬ ಉತ್ಕೃಷ್ಟ ಗುಣದಲ್ಲಿಯೇ ಸಮ್ಮಿಳಿತವಾಗುತ್ತವೆ.

''ದಾನಕೊಡುವುದರಿಂದ ಗಳಿಸಿಕೊಳ್ಳುವ ಪುಣ್ಯಸಂಪತ್ತೇ ಜೀವನದಲ್ಲಿ ನಾವು ಗಳಿಸಿಕೊಳ್ಳಬಹುದಾದ ಬಹಳ ಉತ್ತಮವಾದ ಸಂಪತ್ತು. ಇದನ್ನು ಕಳ್ಳಕಾಕರು ಹೊತ್ತೊಯ್ಯಲಾರರು. ದಾನಶೀಲತೆಯು ಮನಸ್ಸಿನಲ್ಲಿ ಮನೆಮಾಡಿರುವ ಸ್ವಾರ್ಥ ಮತ್ತು ಕಾಮನೆಗಳನ್ನು ತೊಳೆದು ಮನಸ್ಸನ್ನು ಶುದ್ಧಮಾಡುವುದು. ದೇಹ-ದೇಹಾಂತರಗಳ ಈ ಸಂಸಾರ ಪಯಣದಿಂದ ಉಂಟಾಗುವ ಶ್ರಮವನ್ನು ನೀಗುವುದು. ದಾನಶೀಲತೆಯು ನಮ್ಮ ಜೀವನದ ಅತ್ಯುತ್ತಮ ಮಿತ್ರನಾಗಿ ಪರಿಣಮಿಸುತ್ತದೆ. ನಮಗೆ ಅಪಾರ ಶಾಂತಿಯನ್ನೂ, ಸಮೃದ್ಧಿಯನ್ನೂ ತಂದುಕೊಡುತ್ತದೆ.

''ದಾನಮಾಡುವುದು ಉತ್ತಮಕರ್ಮವಾಗುತ್ತದೆ. ಅದು ಎಲ್ಲ ಸಂಪತ್ತಿನ ಕಾರಣವೂ ಆಗುತ್ತದೆ. ಒಳ್ಳೆಯ ಮನಸ್ಸಿನಿಂದ ಒಬ್ಬ ಬಡವನಿಗೆ ಹರಕುಬಟ್ಟೆಯನ್ನು ನೀಡಿದರೂ ಅದು ದೊಡ್ಡ ಕೊಡುಗೆಯೇ ಆಗಿದೆ.''

ರಾಜನ ಈ ಸ್ಫೂರ್ತಿಭರಿತ ನುಡಿಯನ್ನು ಕೇಳಿದ ಸಭಾಸದರು ಅವನ ಈ ಅಪೂರ್ವನುಡಿಗಳಿಗೆ ಸಮ್ಮತಿಯನ್ನು ವ್ಯಕ್ತಪಡಿಸಿದರು. ತಾವೂ ಕೂಡ ರಾಜನಂತೆಯೇ ದಾನ, ಧರ್ಮಗಳ ಬಾಳುವೆಯನ್ನು ಬದುಕಬೇಕೆಂದು ಸಂಕಲ್ಪ ಮಾಡಿದರು.

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಅಮ್ಮಾ, ಸೃಷ್ಟಿಯಲ್ಲಿ ಎಲ್ಲವೂ ಒಂದೇ ಸಲಕ್ಕೆ ಆಗಿಹೋಗಿವೆ, ಒಂದೊಂದಾಗಿ ಅಲ್ಲ ಎಂದು ನೀವು ಜಯರಾಮಬಾಟಿಯಲ್ಲಿ ಹೇಳಿದ್ದಿರಿ.

**ಶ್ರೀಮಾತೆ :** ಭಗವಂತನೇನು ಎಲ್ಲವನ್ನೂ ಒಂದೊಂದಾಗಿ ಸೃಷ್ಟಿಸುತ್ತ ಹೋದನೇನು? ಭಗವಂತನದು ಒಂದು ಯಂತ್ರದಂತೆ — ಹಿಟ್ಟು ಅರೆಯುವ ಒಂದು ಯಂತ್ರದಂತೆ. ಯಂತ್ರ ನಡೆಸುವವನು ಅದು ಕೆಟ್ಟುಹೋಗದಂತೆ ನೋಡಿಕೊಳ್ಳುತ್ತಾನೆ. ಅವನು ಪ್ರತಿಯೊಂದು ಗೋಧಿಯೂ ಹಿಟ್ಟಾಗುತ್ತದೋ ಇಲ್ಲವೋ ನೋಡಿಕೊಳ್ಳುತ್ತಾನೆ. ಎಲ್ಲಿ ಯಾರು ಏನೇನು ಸಣ್ಣಪುಟ್ಟ ಕೆಲಸ ಮಾಡುತ್ತಾರೆ ಎಂದು ಅವನಿಗೆ ನೋಡಲಾಗುತ್ತದೆಯೆ ? ಅವನದು ಅನಂತ ಸೃಷ್ಟಿ ; ಅವನು ಪ್ರತಿಕ್ಷಣವೂ ಅದನ್ನು ನೋಡಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ಸಣ್ಣಪುಟ್ಟ ವಿವರಗಳನ್ನು ನೋಡುತ್ತಿದ್ದರೆ ಜಗತ್ತು ಹೇಗೆ ನಡೆಯಬೇಕು ?

ಜಗನ್ಮಾತೆ ಕಾಳಿ! ಅವಳೇ ಎಲ್ಲರ ತಾಯಿ. ಅವಳೇ ಎಲ್ಲರ ತಾಯಿ. ಅವಳಿಂದಲೇ ಎಲ್ಲ ಒಳಿತು, ಕೆಡುಕುಗಳು ಉಂಟಾಗಿವೆ. ಅವಳೇ ಎಲ್ಲವನ್ನೂ ಸೃಷ್ಟಿಸಿದ್ದಾಳೆ.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೨೦೯-೧೧